ಬಹುದೂರ ಬಂದಿದ್ದೀರಿ. ದಕ್ಷಿಣದ ಜನಾಂಗೀಯಭೇದ ಮತ್ತು ಕೃಷಿ ಬದುಕಿನ ನಾಶದ ಬಗ್ಗೆ ನೀವು ಹೆಚ್ಚು ವ್ಯಾಕುಲಗೊಂಡಂತಿಲ್ಲ.

ನಾನು ದಕ್ಷಿಣದ ಪರಂಪರೆಗೆ ಸೇರಿದವಳು. ದಕ್ಷಿಣದ ಬಗ್ಗೆ ನನಗೆ ಬಹಳ ಅಭಿಮಾನವಿದೆ. ತಪ್ಪು ಮಾಡಿದ ಬಿಳಿಗುಂಪಿಗೆ ಸೇರಿದವಳು ಅಂತ ಗೊತ್ತಿದೆ. ಆದರೆ, ಅದು ನನ್ನನ್ನು ಕುಗ್ಗಿಸುವುದಿಲ್ಲ. ನನಗೆ ನೆಮ್ಮದಿಯಾಗಿರಲು ಸಾಧ್ಯವೇ ಇಲ್ಲ. ಯಾವಾಗಲೂ ಅಲೆಮಾರಿ ಚೇತನ. ಚಿಕ್ಕವಳಿದ್ದಾಗ ಯಾವಾಗಲೂ ಓಡಿಹೋಗುತ್ತಿದ್ದೆ. ಬಹಳ ದೂರ ಓಡಿಹೋಗುವ ಮುಂಚೆಯೇ ಯಾರಾದರೊಬ್ಬರು ನನ್ನನ್ನು ಹಿಡಿದು ಕರೆತರುತ್ತಿದ್ದರು. ಆರು ವರ್ಷದವಳಿದ್ದಾಗ ನಮ್ಮಪ್ಪ ಹೀಗೆ ಎಲ್ಲಿಂದಲೋ ನನ್ನ ಹಿಡಿದುಕೊಂಡು ಬಂದರು. "ಯಾಕೆ ಹೀಗೆ ಒದ್ದಾಡ್ತಿಯಾ? ನಮ್ಮ ಜೊತೆ ಯಾಕಿರುವುದಿಲ್ಲ?" ಅಂತ ಕೇಳಿದರು. "ನಾನು ಹೊರಗೆ ಹೋಗಿ ಜಗತ್ತನ್ನು ಸುತ್ತಿನೋಡಬೇಕು. ಜಗತ್ತು ಹೇಗಿದೆ ಅನ್ನೋದು ನನ್ನ ಅಂಗೈನ ಹಾಗೆ ಗೊತ್ತಾಗಬೇಕು" ಅಂದಿದ್ದೆ.

◆ ಹದಿನಾರನೆಯ ವಯಸ್ಸಿಗೆ ಕಡೆಗೂ ಸಾಧಿಸಿದಿರಿ.

ಹದಿನಾರನೆಯ ವಯಸ್ಸಿನಲ್ಲಿ ನ್ಯೂ ಓರ್ಲಿಯನ್ಸ್‌ನಿಂದ ಓಡಿಹೋಗಿ ಮದುವೆಯಾದೆ. ಮತ್ತೆ 21ನೆಯ ವಯಸ್ಸಿನಲ್ಲಿ ಚಿಕಾಗೊಗೆ ಓಡಿಹೋಗಿ ದಿನಪತ್ರಿಕೆಯೊಂದರಲ್ಲಿ ಕೆಲಸಕ್ಕೆ ಸೇರಿದೆ. ಸಿನಿಮಾಗೂ ಹೋದೆ.

◆ ಸಿನಿಮಾ?

ದಿನಪತ್ರಿಕೆಯವರು ಸ್ಟೋರಿ ಮಾಡಿಕೊಂಡು ಬರಲು ಮೂವಿ ಸ್ಟುಡಿಯೊಗೆ ಕಳುಹಿಸಿದರು. "Little Boy Blueಗೆ ಹೀಗೆ ಬನ್ನಿ" ಅಂತ ಆ ವ್ಯಕ್ತಿ ಹೇಳಿದ. ಅಲ್ಲಿ ಫ್ರಾನ್ಸಿಸ್ ಬುಷ್ಮನ್(ಅಮೆರಿಕ ನಟ)ನ ಕೋರ್ಟ್‌ರೂಂ ಸೀನ್ ನಡೆಯುತ್ತಿತ್ತು. ಏನಾಯಿತು ಅಂತ ಅರ್ಥವಾಗದೆ ಹೆದರಿದೆ. ಅವರು ಮೊದಲನೆಯ ದಿನದ ಕೆಲಸಕ್ಕೆ ಐದು ಡಾಲರ್ ಕೊಟ್ಟರು. ಅಲ್ಲೇ ಇದ್ದುಬಿಟ್ಟೆ. ಒಂದು ವಾರದ ಅನಂತರ ನಾನಲ್ಲಿಗೆ ಯಾಕೆ ಬಂದೆ ಅನ್ನೋದು ನೆನಪಾಯಿತು. ಮತ್ತೆ ಪತ್ರಿಕೆಗೆ ಹೋದೆ. ಅವರು ಒಂದು ವಾರ ಏನೂ ಕೆಲಸ ಮಾಡದೆ ಇದ್ದರೂ ಹದಿನೆಂಟು ಡಾಲರ್ ಕೊಟ್ಟು ಕೆಲಸದಿಂದ ವಜಾ ಮಾಡಿದರು!

ಸಿನಿಮಾದಲ್ಲಿ ಆರು ತಿಂಗಳು ಕೆಲಸ ಮಾಡಿದೆ. ಅಷ್ಟೊತ್ತಿಗೆ ದಿನಕ್ಕೆ ಹತ್ತು ಡಾಲರ್ ಸಿಗುತ್ತಿತ್ತು. ಒಂದು ದಿನ ಅವರು, "ನಾವು ಸಮುದ್ರ ಪ್ರದೇಶಗಳ ಕಡೆ ಹೋಗುತ್ತಿದ್ದೇವೆ" ಎಂದರು. "ನಾನು ಬರುವುದಿಲ್ಲ" ಅಂದೆ. "ನಿನಗೆ ಸಿನಿಮಾ ತಾರೆ ಆಗುವುದು ಇಷ್ಟವಿಲ್ಲವಾ?" "ಇಲ್ಲ." "ಶತದಡ್ಡಿ!" ಅಂತಂದು ಹೊರಟುಹೋದರು. ಆಗ 1914ರ ಮಹಾಯುದ್ಧ ಶುರುವಾಗಿತ್ತು. ಸೆಪ್ಟೆಂಬರ್‌ನಲ್ಲಿ ಮನೆಗೆ ಹೋದೆ.

◆ ಆಮೇಲೆ?

ಟೆಕ್ಸಾಸ್ ಮತ್ತು ಲೂಸಿಯಾನಗಳಿಗೆ ಹೋಗಿ ಹಳೆಯ ಸ್ಕಾಟಿಷ್ ಲಾವಣಿಗಳನ್ನು ಹಾಡುತ್ತಿದ್ದೆ. ಅದಕ್ಕೆ ಬೇಕಾದ ಬಟ್ಟೆಗಳನ್ನು ನಾನೇ ಹೊಲೆದುಕೊಂಡಿದ್ದೆ. ಆಗ ಕ್ಷಯ ರೋಗ ಬಂದು ಸುಮಾರು ಆರುವಾರ ಆಸ್ಪತ್ರೆಯಲ್ಲಿದ್ದೆ. ಆಗ ಡೆನ್ವರ್‌ನ ದಿನಪತ್ರಿಕೆಯಲ್ಲಿ ಕೆಲಸ ಸಿಕ್ಕಿತು.

◆ ಆ ಸಮಯದಲ್ಲೂ ಬರೆಯುತ್ತಿದ್ದಿರಾ?